## ಕಳೆದ ಸಂಚಿಕೆಯಲ್ಲಿ

ಗಿರಿಯಪ್ಪನ ಗಿಳಿಶಾಸ್ತ್ರ ಮನೆಮಾತಾಗಿರುತ್ತದೆ. ದೇವಪ್ಪನನ್ನು ಉದ್ದೇಶಿಸಿ ಶಾಸ್ತ್ರ ಹೇಳುವಾಗ ಎಲ್ಲವೂ ಚೆನ್ನಾಗಿದೆ. ದೇವಪ್ಪ ಪರೋಪಕಾರಿ ಮನುಷ್ಯ. ಹಸ್ತರೇಖೆ, ಗರುಡರೇಖೆ ಎಲ್ಲವೂ ಚೆನ್ನಾಗಿಯೇ ಇದೆ ಎನ್ನುತ್ತಾನೆ. ಜೊತೆಗೆ 'ನಿನಗೆ ಮೋಸ ಮಾಡಲು ಕೆಲವರು ಬರುತ್ತಾರೆ. ಇದನ್ನು ತಡೆಬೇಕಾದರೆ, 'ನೀವು ಒಂದು ಪೂಜೆ ಮಾಡಿಸಿ ಒಂದು ಬೆಳ್ಳಿ ಗಿಳಿ ಮಾಡಿಸಲಿಕ್ಕೆ ದುಡ್ಡು ಕೊಟ್ಟರೆ ನಿಮ್ಮ ಸ್ನೇಹಿತರು ನಿಮಗೆ ದೋಖಾ ಮಾಡ್ತಾರೋ ಇಲ್ಲವೋ ಅನ್ನೋದನ್ನು ಗಿಳಿ ಹೇಳ್ತದೆ' ಎನ್ನುತ್ತಾನೆ ಗಿರಿಯಪ್ಪ. ದೇವಪ್ಪನ ತಾಯಿ ಶಿವಮ್ಮಳನ್ನೂ ಇದೇ ರೀತಿ ಹೇಳಿ ಸಾವಿರದ ಒಂದು ರೂಪಾಯಿ ಕೊಟ್ಟರೆ ಎಲ್ಲವೂ ಸರಿಹೋಗುತ್ತದೆ ಎನ್ನುತ್ತಾ ದೇವಪ್ಪನನ್ನು ಹೊಗಳಲಾರಂಭಿಸುತ್ತಾನೆ. ಇದುವರೆಗೆ ಗಿರಿಯಪ್ಪನಿಗೆ ದುಡ್ಡು ಕೊಡುವುದಕ್ಕೆ ಬೈಯುತ್ತಿದ್ದ ದೇವಪ್ಪ ಈ ಸಲ ತಾನೇ ಇನ್ನಷ್ಟು ದುಡ್ಡು ತೆಗೆದು ಅವನ ಕೈಗಿಟ್ಟಾಗ ಗಿಳಿ ಗಿರಿಯಪ್ಪ ಮತ್ತಷ್ಟು ಸಂತುಷ್ಟನಾಗುತ್ತಾನೆ.



ಕಿವಿಗೂ ತಲುಪಲು ತಡವಾಗಲಿಲ್ಲ. ಅನಸವ್ವ ಒಂದು ಸಲ ಹೊಟೇಲಿನಲ್ಲಿ ಬಹಳ ಜನ ಇದ್ದಾಗಲೇ ಗಂಡನನ್ನು ಕೆಣಕಿದಳು.

'ಏನು, ಮೊನ್ನೆ ಮಲ್ಲಪ್ಪಕಾಕಾನ ಮುಂದೆ ಏನೋ ಮಾತಾಡಿದೆಯಂತ? ಹೇಂತಿ ಬಗ್ಗೆ ಅಲ್ಲಸಲ್ಲದ್ದು ಮಾತಾಡಲಿಕ್ಕೆ ಸುರು ಮಾಡೀದಿ...' 'ನಾನ? ನಾ ಹೇಳಿದ್ನಾ? ಕರಕೊಂಡು ಬಾ ಇಲ್ಲಿ. ಯಾರವರು? ಹಂಗಂದವರು?'

'ಇಲ್ಲೆ ಅದಾನು ನೋಡು ಮಲ್ಲಪ್ಪಕಾಕಾ. ಅಂವನಿಗೆ ಕದ್ದು ಹೇಳಿದೆಯಂತೆ.'

ಅಲ್ಲಿಯೆ ಬಾಗಿಲ ಬಳಿ ನಿಂತಿದ್ದ ಮಲ್ಲಪ್ಪಕಾಕಾ ಇದು ತನ್ನನ್ನು ಸುತ್ತಿಕೊಳ್ಳುತ್ತಿದೆಯೆಂದು ಬೆವರಿದ. ಹೊಟೇಲ್ ಬಿಲ್ಲು ಎಷ್ಟಾದರೂ ಆಗಿರಲಿ, ಹಿಂದಿನ ಉದ್ರಿ ಕೇಳುವ ಸಲುವಾಗಿ ಅನಸವ್ವ ಈ ತರ ಹೇಳಿರಬಹುದೆಂದು ಅನಿಸಿ ಐದರ ನೋಟು ಇಟ್ಟು ಬದಗ್ಗನೆ ಜಾಗ ಖಾಲಿ ಮಾಡಿದ. 'ಅನಸವ್ವ ಮಗಳೆ, ಐದು ರೂಪಾಯಿ ಇಟ್ಟೇನಿ ನೋಡು.' ಅನಸವ್ವ, ಎಷ್ಟೊಂದು ವ್ಯವಹಾರ ಮಾಡುತ್ತಾಳೆ. ತಾನು ಹೇಳಿದ್ದೇ ಒಂದು. ಆಕೆ ಹೇಳುವುದೆ ಇನ್ನೊಂದು. ಅಲ್ಲದೆ ದೇವಣ್ಣ ಕೂಡ ಸಾಚಾ ಅಲ್ಲ. ಅವನ ಪುರಾಣ ಬಿಚ್ಚಿಟ್ಟರೆ ಆಕೆ ಗಂಡನನ್ನು ಮನೆ ಬಿಟ್ಟೆ ಓಡಿಸಿಯಾಳು!

'ನೋಡು, ಮಲ್ಲಪ್ಪಣ್ಣ ಹಂಗ್ಯಾಕ ಓಡಿಹೋದ? ಅಂವಂದು ಸುಳ್ಳು ಖತಿ ಅಂತ. ಮಂದಿ ನಮ್ಮಿಬ್ಬರ ನಡುವಿ ಜಗಳ ಹಚ್ಚತಾರು. ಹುಷಾರದಿಂದ ಇರು.'

ದೇವಪ್ಪ ಅಂದು ಜಗಳ ಮಾಡಬಾರದೆಂದು ಸುಮ್ಮನಾದ. ಆ ರಾತ್ರಿ ಉದುಪುಡಿಗೆ ಅಡುಗೆ ಮಾಡಲು ಹೋಗಬೇಕಿತ್ತು. ಹೆಂಡತಿಯ ಕಡೆ ಎರಡು ನೂರು ರೂಪಾಯಿಯಾದರೂ ಇಸಿದುಕೊಂಡು ಹೋಗಬೇಕು. ಅಡುಗೆ ಬೇಕಾಗುವ ಸಂತೆಯನ್ನು ತಾನೆ ತರುತ್ತೇನೆಂದು ಹೇಳಿದ್ದಾನೆ. ಬರೀ ಅಡುಗೆ ಮಾಡಿದ ಕೂಲಿಯೆಂದರೆ ಕೆಲವೊಂದು ಸಲ ಮೈಮೇಲೆಯೇ. ಅನೇಕ ಸಲ ಆದಾಯಕ್ಕಿಂತ ಖರ್ಚು ಹೆಚ್ಚು. ದುರ್ಗಪ್ಪ, ಪರಪ್ಪ ಮೊನ್ನೆ ಇಬ್ಬರೂ ಸಾವಿರ ರೂಪಾಯಿ ಸಾಲ ಇಸಿದುಕೊಂಡರು. ಇನ್ನು ಅವರು ತಿರುಗಿ ಕೊಟ್ಟಂತೆಯೆ! ತಮ್ಮ ಪಗಾರದಲ್ಲಿ ಮುರಿದುಕೊಳ್ಳಿರಿ ಅನ್ನುತ್ತಾರೆ. ಹೊಟೇಲ್ ವ್ಯಾಪಾರ, ಅಡುಗೆ ಮಾಡುವುದು ನೋಡುವವರ ಕಣ್ಣಿಗೆ ತುಂಬ ಗಳಿಸುವ ಉದ್ಯೋಗವೆಂಬಂತೆ ಕಾಣುತ್ತವೆ. ಆದರೆ ದುಡಿಯುವವರಿಗೆ ಕೊಟ್ಟು, ಬಸ್‌ಚಾರ್ಜ್ ಕೊಟ್ಟು, ಎಲೆ ಅಡಿಕೆ ತಂಬಾಕಿನ ಖರ್ಚು ಕೊಟ್ಟು ಲೆಕ್ಕ ಹಾಕಿದರೆ ಎಲ್ಲಾ ಖಾಲಿ ಖಾಲಿ! ಊರಲ್ಲಿ ಇದಕ್ಕಿಂತ ಜಾಸ್ತಿ ದುಡಿಯಬಹುದು. ಹೆಂಡತಿಯ ಬಾಯಿ ಕಟ್ಟಿಗೆಯದಾಗಿದ್ದರೆ ಇಷ್ಟೊತ್ತಿಗೆ ಒಡೆದುಹೋಗಿರುತ್ತಿತ್ತು. ಆಕೆಯನ್ನು ಸಮಾಧಾನಪಡಿಸಲು ಇಡೀ ಜೀವಮಾನವೆ ಕಳೆದು ಹೋಗುತ್ತದೆಯೇನೊ! ಇತ್ತೀಚೆಗಂತೂ ಅವಳ ವರ್ತನೆಗೆ ರೋಸಿಹೋಗಿದ್ದಾನೆ.

ಬೇರೆ ಊರಿಗೆ ಅಡುಗೆ ಮಾಡಲೆಂದು ಹೋದರೆ ಆಕೆಗೆ ವಿಪರೀತ ಸಂಶಯ. ಸಿಟ್ಟು ಮಾಡಿಕೊಂಡರೆ ಕನಿಷ್ಠ ಎಂಟು ದಿನವಾದರೂ ಅವಳ ಬಿಗುಮಾನ ಇಳಿಯುತ್ತಿಲಿಲ್ಲ. ಇತ್ತೀಚೆಗೆ ಯಾಕೊ ಅವಳ ಭಿನ್ನಮತ ಶಮನವಾಗುವ ಲಕ್ಷಣಗಳೇ ಕಾಣಿಸುತ್ತಿಲ್ಲ. ಮೊನ್ನೆ ಅವಳ ತಾಯಿ ಬಂದು ಹೋದಳು. ಎಂದಿನಂತೆ ಉಪದೇಶ ಮಾಡಿರಬೇಕು. ತಾನು ಮಾತಾಡಿದರೂ ಅತ್ತೆ ಮಾತಾಡಲಿಲ್ಲ. ತಿರುಗಿ ತನಗೇ ಬೈದುಹೋದಳು.

'ನಮ್ಮ ಅನಸವ್ವನ ಮನಸ್ಸು ನೋಯಿಸಿದ್ರ ನಿನ್ನ ಪಾಡು ಸರಿ ಇರಾಕಿಲ್ಲ ನೋಡು. ಹೂವು ನೋಡಿಕೊಳ್ಳುವಂಗ ನೋಡಿಕೊಳ್ಳತೇನಿ ಅಂದಿದ್ದೆಲ್ಲ ಆವಾಗ? ಮರಿತೇನು?' ಅನಸವ್ವಳ ಅವ್ವ ಕಲ್ಲವ್ವನಿಗೆ ಎಷ್ಟು ಧೈರ್ಯ! ಗಿರಾಕಿಗಳೆದುರು ಸ್ವಂತ ಅಳಿಯನಿಗೆ ಅವಮಾನ ಮಾಡುವುದೆ? ಇವನಿಗೂ ಸಿಟ್ಟು ಬಂದಿತ್ತು. ಅಲ್ಲಿಯೇ ಇದ್ದ ದುಂಡಪ್ಪಕಾಕಾ ಸುಮ್ಮನಿರುವಂತೆ ಸನ್ನೆ ಮಾಡಿದ. ಈತ ಮತ್ತೂ ತಡೆದುಕೊಂಡ. ಈಗೀಗಂತೂ ಹಂಡತಿಯದು ಎಲ್ಲದಕ್ಕೂ ಅಸಹಕಾರ ಚಳವಳಿ. ಆಕೆ ನೆರವಿಗೆ ಬಂದರೂ ಸರಿ, ಬರದಿದ್ದರೂ ಸರಿ. ಎರಡು ತಾಸು ರಾತ್ರಿ ಇರುವಾಗಲೆ ಏಳುವನು. ಮುಖ ತೊಳೆದುಕೊಂಡು, ಅಂಗಳ ಕಸ ಹೊಡೆದು, ಎಲ್ಲ ಚಿಂತೆ ಮರೆಯುವವನಂತೆ ಎಲೆಅಡಿಕೆತಂಬಾಕಿನ ತಲಬು ಮಾಡಿ ಮೈಮುರಿದನೆಂದರೆ ಕೆಲಸಕ್ಕೆ ಸಿದ್ಧನೆಂದು ಹೇಳಿದಂತೆ. ಆಮೇಲೆ ಅವನನ್ನು ಹಿಡಿಯುವವರೆ ಇಲ್ಲ. ಹೆಂಡತಿ ಮುನಿಸಿಕೊಂಡ ಸಂದರ್ಭದಲ್ಲಿ ಅವನಿಗೆ ಥಕ್ಕನೆ ನೆನಪಾಗುವವನೆಂದರೆ ಸಹಾಯಕ ದುರ್ಗಪ್ಪ. ಇತ್ತೀಚೆಗೆ ಗಂಡ ಹೆಂಡತಿಯರ ಮುನಿಸು ತಾರಕಕ್ಕೆ ಏರಿದ ಮೇಲೆ ದುರ್ಗಪ್ಪ ಬಡಪಾಯಿ ಕೂಸು ಆಗಿದ್ದ. ಗಂಡನ ಮಾತು ಕೇಳಿದರೆ ಹೆಂಡತಿಗೆ ಸಿಟ್ಟು. ಹೆಂಡತಿಯ ಮಾತು ಕೇಳಿದರೆ ಗಂಡನಿಗೆ ಸಿಟ್ಟು. ದುರ್ಗಪ್ಪನ ನೆನಪು ಬಂದ ಕೂಡಲೆ ತನ್ನ ಮೋಟಾರ ಸೈಕಲ್ ಸುರು ಮಾಡಿ ಊರ ಕಡೆ ನಡೆಯುತ್ತಿದ್ದ. ಇನ್ನು ರಾತ್ರಿಯಿರುವ ಕಾರಣ ನಾಯಿಗಳು ಬೊಗಳುತ್ತಿದ್ದವು.

'ಏಯ್ ದುರ್ಗಪ್ಪ, ನಾಯಿ ಒದರಲಿಕ್ಕೆ ಹತ್ಯಾವಲ್ಲ. ಹೆದರಬೇಕೇನು ಅವಕ್ಕ?'

'ಅವಕ್ಯಾಕ ಹೆದರಬೇಕ್ರಿ ಅಣ್ಣಾರ? ನಾಯಿ ಬೊಗಳ್ತಾವು, ನಾವು ಅವಕ್ಕ ಅಂಜಬಾರದು ಅಷ್ಟೇ.'

'ಹೂಂ. ಹೊಟೇಲಿಗೆ ಹೋದ ಕೂಡಲೆ ಒಂದು ನಾಯಿ ಕಡೀಲಿಕ್ಕೆ ಬರ್ತದ, ಹೆದರಬ್ಯಾಡ.' ದೇವಪ್ಪ ಹೆಂಡತಿ ಅನಸವ್ವಳ ಬಗ್ಗೆ ಹೇಳುತ್ತಿದ್ದಾನೆಂದು ದುರ್ಗಪ್ಪನಿಗೆ ತಕ್ಷಣ ತಿಳಿಯಿತು. 'ಸಾಹುಕಾರರೆ, ಹೇಂತಿಗೆ ಹಂಗೆಲ್ಲ ಅನಬಾರದು ಬಿಡ್ರಿ.' ಸಾಹುಕಾರ ನಗುತ್ತ ದುರ್ಗಪ್ಪನಿಗೂ ಎಲೆಅಡಿಕೆ ಕೊಟ್ಟ. ನೀರು ಕಾಯಿಸಲು ಒಲೆ ಪುಟಿ ಮಾಡಿದ. ದುರ್ಗಪ್ಪ ಹಿಂದಿನ ದಿನದ ಎಲ್ಲ ಪಾತ್ರೆ ತೊಳೆಯತೊಡಗಿದ. ಆತ ಯಾವ ಕೆಲಸ ಹೇಳಿದರೂ ಮಾಡುತ್ತಾನೆ. ಕಸಮುಸರೆ ಮಾಡಲು ತಾನೇನು ಕೂಲಿಯ ಆಳಲ್ಲವೆಂದು ಹೆಂಡತಿ ಹೇಳಿ ಬಹಳ ದಿನಗಳಾದವು. ಆಗಿನಿಂದ ದುರ್ಗಪ್ಪ ಕೆಲಸಕ್ಕಿದ್ದಾನೆ. ಹೆಂಡತಿ ಬಾವಿಯಿಂದ ನೀರು ತರದಿದ್ದರೆ ದೇವಪ್ಪ ತಾನೆ ನೀರು ತರುವನು. ನೀರು ಜಗ್ಗುವುದರಲ್ಲಿ ದೇವಪ್ಪ ಮತ್ತು ಇನ್ನೂ ಹುಡುಗನಿರುವ ನಾಗಪ್ಪನಿಗೆ ಯಾವಾಗಲೂ ಪೈಪೋಟಿ. ನೀರು ತರುತ್ತಲೆ ಆತ ಉಪ್ಪಿಟ್ಟಿಗೆ ಎಸರು ಇಡುವನು. ಅವನು ಹೀಗೆ ದೆವ್ವ ಹೊಕ್ಕವರಂತೆ ಕೆಲಸ ಮಾಡುವುದನ್ನು ನೋಡುವುದು ದುರ್ಗಪ್ಪನಿಗೆ ತುಂಬಾ ಖುಷಿ. ದೇವಣ್ಣ ಮಾಡುವ ತಿಂಡಿಗಳಿಗೆ ಒಂದು ರುಚಿ. ಹಾಗೆಯೆ ಅನಸವ್ವ ಮಾಡುವ ತಿನಿಸುಗಳಿಗೂ ಮತ್ತೊಂದು ರುಚಿ. ಶೇಂಗಾ, ಉದ್ದಿನ ಬೇಳೆ, ಕಡಲೆ ಬೇಳೆ, ಲಿಂಬು ಬೆರೆಸಿದ ದೇವಣ್ಣನ ಚಿತ್ರಾನ್ನ ತಿನ್ನುವುದೆಂದರೆ ಸ್ವರ್ಗಕ್ಕೆ ಕಿಚ್ಚು ಹಚ್ಚಿದಂತೆಯೆ.

ಆವತ್ತು ಮುಂಜಾನೆ ದೇವಣ್ಣ ದುರ್ಗಪ್ಪನ ಸಹಾಯ ಪಡೆದುಕೊಂಡು ಹೆಂಡತಿ ಏಳುವುದಕ್ಕಿಂತ ಮೊದಲೇ ಉದ್ದಿನ ವಡಾ ತಯಾರಿಸಿದ. ವಡಾ ಬಾಯಲ್ಲಿಟ್ಟರೆ ಕರಗುವಂತಿತ್ತು. ದೇವಣ್ಣನಿದ್ದರೆ ಹೊಟೇಲಿಗೆ ಮೆರುಗು. ಇಲ್ಲದಿದ್ದರೆ ಭಣ ಭಣ. ಯಾಕೆ ದೇವಣ್ಣ ಇತ್ತೀಚೆಗೆ ಮದುವೆ ಅಡುಗೆ ಗುತ್ತಿಗೆ ಊರೂರು ಅಲೆಯುತ್ತಿದ್ದಾನೆ? ಇಲ್ಲಿ ಅನಸವ್ವ ಒಂದು ಪಗಾರಕ್ಕೆ ನಾಲ್ಕು ಪಗಾರದ ಕೆಲಸ ಮಾಡಿಸಿಕೊಳ್ಳುತ್ತಾಳೆ. ಹೀಗಾಗಿ ಕೆಲವರು ಕೆಲಸ ಬಿಟ್ಟು ಹೋಗುವರು. ದೇವಣ್ಣ ಹೆಂಡತಿಗೆ ತಿಳಿಹೇಳಿದರೂ ಆಕೆ ಕೇಳುವುದಿಲ್ಲ. ರಾತ್ರಿ ಪ್ರೀತಿಯಿಂದ ಹೇಳಿದರಾಯಿತು ಎಂದುಕೊಂಡ. ಎಷ್ಟೇ ಮುದ್ದಿಸಿದರೂ ಅನುಸೂಯೆ ಮತ್ತಷ್ಟು ಮುದ್ದೆಯಾಗಿ ಮಲಗುವಳು. ಇವಳ ಹೃದಯವನ್ನು ಕಲ್ಲಿನಿಂದ ಮಾಡಿರಬೇಕು! ಇತ್ತೀಚೆಗೆ ವರ್ಷವಾದರೂ ಆಕೆ ತನ್ನ ಹತ್ತಿರ ಬರುವುದಿಲ್ಲ. ಆಕೆಯನ್ನು ರಮಿಸಹೋದರೂ ಆಯಿತು, ಕ್ಷಮಿಸೆಂದು ಕೇಳಹೋದರೂ ಆಯಿತು, ನಿದ್ದೆ ಬಂದಿದೆಯೆಂದು ಹಾವಿನಂತೆ ಮೈಮುರಿಯುತ್ತಾಳೆ! ಯಾವ ತೃಪ್ತಿಯಿಂದ ಮೈಮುರಿಯುತ್ತಾದ್ದಾಳೊ? ಯಾಕೆ ತನ್ನನ್ನು ದ್ವೇಷಿಸುತ್ತಿದ್ದಾಳೆ? ತನ್ನನ್ನು ಅಷ್ಟು ತುಚ್ಛವಾಗಿ ಕಾಣುವ ಅಗತ್ಯವೇನಿದೆ? (ಸಶೇಷ)